# ಶಿವರಾಮ ಕಾರಂತರ ಮುಕ್ತದ್ವಾರ – ಗೀತನಾಟಕ ಒಂದು ಅಧ್ಯಯನ

**ಸೌಮ್ಯ ಹೊಳ್ಳ ಟಿ.* & ರಾಜಶೇಖರ ಜಮದಂಡಿ****

**DOI: https://doi.org/10.5281/zenodo.22107478**

**ABSTRACT**

ಶಿವರಾಮ ಕಾರಂತರ 'ಮುಕ್ತದ್ವಾರ' ಕನ್ನಡ ಗೀತನಾಟಕ ಪರಂಪರೆಯಲ್ಲಿ ಮಹತ್ವದ ಸ್ಥಾನ ಪಡೆದಿರುವ ಕೃತಿಯಾಗಿದೆ. ಸಾಹಿತ್ಯ, ಸಂಗೀತ ಮತ್ತು ರಂಗಕಲೆಯ ಸಮನ್ವಯದಿಂದ ರೂಪುಗೊಂಡಿರುವ ಈ ಗೀತನಾಟಕವು ಮಾನವ ಜೀವನ, ಧರ್ಮ, ತತ್ವಚಿಂತನೆ ಹಾಗೂ ಮಾನವೀಯ ಮೌಲ್ಯಗಳನ್ನು ವಿಶಿಷ್ಟವಾಗಿ ನಿರೂಪಿಸುತ್ತದೆ. ಈ ಅಧ್ಯಯನವು 'ಮುಕ್ತದ್ವಾರ' ಗೀತನಾಟಕದ ವಸ್ತು, ರಚನಾ ವೈಶಿಷ್ಟ್ಯ, ಸಂಗೀತ ಮತ್ತು ರಂಗಪ್ರಯೋಗ, ಹಾಗೂ ಅದರಲ್ಲಿನ ತಾತ್ವಿಕ ಮತ್ತು ಸಾಮಾಜಿಕ ಆಶಯಗಳನ್ನು ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ. ಕಾರಂತರ ಗೀತನಾಟಕಗಳ ಬೆಳವಣಿಗೆಯಲ್ಲಿ ಯಕ್ಷಗಾನ, ಜನಪದ ರಂಗಭೂಮಿ, ಸಂಸ್ಕೃತ ರೂಪಕಗಳು ಮತ್ತು ಪಾಶ್ಚಾತ್ಯ ಒಪೆರಾ ಪರಂಪರೆಯ ಪ್ರಭಾವಗಳನ್ನು ಗುರುತಿಸಬಹುದಾಗಿದೆ.

ಮುಕ್ತದ್ವಾರದಲ್ಲಿ ಸೃಷ್ಟಿಪೂರ್ವದ ಶೂನ್ಯತೆಯಿಂದ ಆರಂಭಿಸಿ ವಿವಿಧ ಯುಗಗಳ ಮೂಲಕ ಮಾನವ ನಾಗರಿಕತೆಯ ಬೆಳವಣಿಗೆಯನ್ನು ಕಾಲಚಕ್ರದ ರೂಪಕದ ಮೂಲಕ ನಿರೂಪಿಸಲಾಗಿದೆ. ಉಪನಿಷತ್ ಯುಗ, ದ್ವಾಪರಯುಗ, ಬೌದ್ಧಯುಗ, ಏಸುಯುಗ ಹಾಗೂ ವಿಜ್ಞಾನಯುಗಗಳ ಸಂದರ್ಭದಲ್ಲಿ ಧರ್ಮ, ಕರ್ಮ, ಅಹಿಂಸೆ, ಪ್ರೀತಿ, ಕರುಣೆ, ಸತ್ಯ, ಶಾಂತಿ ಮತ್ತು ಮಾನವೀಯತೆಯಂತಹ ಮೌಲ್ಯಗಳನ್ನು ನಾಟಕ ಪರಿಶೀಲಿಸುತ್ತದೆ.

**KEYWORDS:** ಗೀತನಾಟಕ, ಒಪೆರಾ, ರಂಗಪ್ರಯೋಗ, ಆಧುನಿಕ ಕನ್ನಡ ಸಾಹಿತ್ಯ, ಸಾಮಾಜಿಕ ಸಂಘರ್ಷ.

* **ಸೌಮ್ಯ ಹೊಳ್ಳ ಟಿ.,** ಸಂಶೋಧನಾರ್ಥಿ, ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು.

** **ಡಾ. ರಾಜಶೇಖರ ಜಮದಂಡಿ,** ಪ್ರಾಧ್ಯಾಪಕರು, ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು.

20ನೇ ಶತಮಾನದ ಆಧುನಿಕ ಕನ್ನಡ ಸಾಹಿತ್ಯದಲ್ಲಿ ತನ್ನ ಹುಟ್ಟು ಮತ್ತು ಬೆಳವಣಿಗೆಯನ್ನು ಕಂಡ ಗೀತ ನಾಟಕಗಳು ತಮ್ಮದೇ ಆದ ವಿಶೇಷ ಸ್ಥಾನವನ್ನು ಪಡೆದಿವೆ. ಸಾಹಿತ್ಯ, ಸಂಗೀತ, ರಂಗಕಲೆ, ಈ ಮೂರು ವಿಧದ ವಿಭಿನ್ನ ಕಲೆಗಳು ಒಗ್ಗೂಡಿ, ಗೀತನಾಟಕಗಳು ರೂಪುಗೊಂಡಿರುವುದನ್ನು ಗಮನಿಸುತ್ತೇವೆ. ಶಿವರಾಮ ಕಾರಂತರ 'ಮುಕ್ತದ್ವಾರ' ಕನ್ನಡದ ಮೊಟ್ಟ ಮೊದಲ ಗೀತ ನಾಟಕವೆಂದು ವಿದ್ವಾಂಸರು ಪರಿಗಣಿಸುತ್ತಾರೆ. ಇದು 1930ರಲ್ಲಿ ರಂಗ ಪ್ರದರ್ಶನ ಕಂಡಿತು. ತದನಂತರದ ಮೂರು ದಶಕಗಳಲ್ಲಿ ವೈವಿಧ್ಯಪೂರ್ಣವಾದ ಗೀತ ನಾಟಕಗಳು ಕನ್ನಡದಲ್ಲಿ ಕಾಣಿಸಿಕೊಂಡವು. ಗೀತ ನಾಟಕಗಳ ಉಗಮಕ್ಕೆ ಕಾರಣಗಳು ಮತ್ತು ಅವುಗಳ ಮೇಲಾಗಿರುವ ಪ್ರಭಾವದ ಸ್ವರೂಪವನ್ನು ವಿದ್ವಾಂಸರು ಚರ್ಚಿಸುತ್ತಲೇ ಬಂದಿದ್ದಾರೆ.

ಯಾವ ರೀತಿಯಲ್ಲಿ ಇಂಗ್ಲೀಷ್‌ನ ಅನೇಕ ಸಾಹಿತ್ಯ ಪ್ರಕಾರಗಳು ಕನ್ನಡದಲ್ಲಿ ಕಾಣಿಸಿಕೊಂಡವೋ ಅದೇ ರೀತಿ ಗೀತ ನಾಟಕಗಳು ಪಶ್ಚಿಮ ಪ್ರಣೀತ ಚಿಂತನೆಯಿಂದಲೇ ಕನ್ನಡದಲ್ಲಿ ಹುಟ್ಟಿರಬಹುದು. ಯುರೋಪ್‌ನ ಒಪೆರಾಗಳು ಕನ್ನಡದ ಗೀತ ನಾಟಕಗಳನ್ನು ಹೋಲುತ್ತದೆಯಾದರೂ, ಸಂಸ್ಕೃತದ ಅಪರೂಪಕಗಳು ಮತ್ತು ಭಾರತದ ಪ್ರಾಂತೀಯ ರಂಗ ಪ್ರಭೇದಗಳಲ್ಲೂ ಇದರ ಮೂಲವನ್ನು ಹುಡುಕಬಹುದು. ಜನಪದ ರಂಗಭೂಮಿಯಲ್ಲಿ ಸಂಗೀತ ನೃತ್ಯವನ್ನು ಒಳಗೊಂಡಂತಹ ಯಕ್ಷಗಾನ ಬಯಲಾಟ, ದಾಸರ ಆಟ, ತಾಳಮದ್ದಲೆ, ಕೃಷ್ಣ ಪಾರಿಜಾತ, ಮಾತ್ರವಲ್ಲದೆ ಸಂಸ್ಕೃತ ಅಪರೂಪಕಗಳಾದ ದುಂಬಿಕ, ಪ್ರಸ್ತಾನ, ಹಲ್ಲಿಸ ಮೊದಲಾದವುಗಳ ಪ್ರಭಾವ ಗೀತ ನಾಟಕಗಳ ಮೇಲೆ ಇರುವುದನ್ನು ಡಾ. ವಿಜಯಾ ಸುಬ್ಬರಾಜ್ ತಮ್ಮ ಸಂಶೋಧನಾ ಪ್ರಬಂಧದಲ್ಲಿ ಮಂಡಿಸುತ್ತಾರೆ. 1930ರಿಂದ ತೊಡಗಿ ತದನಂತರದ ದಶಕಗಳಲ್ಲಿ ಸುಮಾರು ಎಪ್ಪತ್ತರಿಂದ ನೂರರಷ್ಟು ಕನ್ನಡ ನಾಟಕ ಗೀತ ನಾಟಕಗಳು ಕನ್ನಡದಲ್ಲಿ ರಚಿಸಲ್ಪಟ್ಟಿವೆ. ಇವುಗಳಲ್ಲಿ ಕೆಲವು ಆಕಾಶವಾಣಿಯಿಂದ ಪ್ರಸಾರಗೊಂಡಿವೆ ಹಾಗೂ ರಂಗಪ್ರದರ್ಶನಗಳನ್ನು ಕಂಡಿವೆ. ಅವು ಆ ಕಾಲದ ಪ್ರೇಕ್ಷಕರು ಮತ್ತು ಕೇಳುಗರನ್ನು ಗುರಿಯಾಗಿಸಿಕೊಂಡರೂ, ಗಂಭೀರ ನಾಟಕಗಳಾಗಿ ಉಳಿದರೂ, ಅವುಗಳ ವಸ್ತು, ಶೈಲಿ, ವೈವಿಧ್ಯತೆ ಇಂದಿಗೂ ಗಮನಾರ್ಹವಾಗಿರುವುದನ್ನು ನಾವು ಗಮನಿಸುತ್ತೇವೆ.

ಸಮಾಜ ಪ್ರಕೃತಿ ಮನುಷ್ಯ ಸಂಬಂಧಗಳನ್ನು ಸಾಹಿತ್ಯಿಕ ಪ್ರಯೋಗ ಶೀಲತೆಗೆ ಒಡ್ಡಿದ ಕಾರಂತರ ಕೃತಿಗಳಲ್ಲಿ, ಗೀತ ನಾಟಕಗಳಿಗೆ ಮಹತ್ವದ ಸ್ಥಾನವಿದೆ. ಸರಿಸುಮಾರು ಹನ್ನೊಂದು ಗೀತ ನಾಟಕಗಳನ್ನು ಅವರು ರಚಿಸಿದ್ದಾರೆ. ಅವರ ಸಾಹಿತ್ಯ ಕೃಷಿಯ ಹರವನ್ನು ಗಮನಿಸಿದರೆ, ಕಾದಂಬರಿಗಳು ನಿರ್ದಿಷ್ಟ ನೆಲೆಯನ್ನು ಪಡೆದಿವೆ. ಆದರೂ ರಂಗ ಪ್ರಯೋಗಶೀಲತೆಯ ಪರಿಣಾಮವಾಗಿ ಅವರು ಯಕ್ಷಗಾನ ಕ್ಷೇತ್ರದಲ್ಲೂ ಅನನ್ಯತೆಯನ್ನು ಸಾಧಿಸಿದ್ದರು.

ಗೀತ ನಾಟಕಗಳಿಗೆ ಪೂರ್ವಭಾವಿಯಾಗಿ ಅವರ ಅನುಸಂಧಾನವು ಯಕ್ಷಗಾನದ ಜೊತೆಗಿರುವುದನ್ನು ಗುರುತಿಸುತ್ತೇವೆ. 'ಯಕ್ಷಗಾನವು ಜನಪದ ಗೀತ ನಾಟಕಗಳಾದರೆ, ಅವರ ಸ್ವಂತ ಗೀತ ನಾಟಕಗಳು ಆಧುನಿಕ ಪ್ರಕಾರವಾಗಿದೆ'. (2. ವಿಜಯಾ ಸುಬ್ಬರಾಜ್) ಅವರ ಮೊದಲ ರಂಗ ಪ್ರಯೋಗಗಳು ಗದ್ಯನಾಟಕ ರೂಪದಲ್ಲಿವೆ. 'ಕರ್ಣಾರ್ಜುನ' ಪೌರಾಣಿಕವಾದರೆ, 'ನಿಷಾಮಹಿಮೆ', 'ಸುಖವೆಲ್ಲಿ', 'ಜ್ವಾಲಾಬಂಧನ', 'ಗೋಮಾತಾ', 'ಗರ್ಭಗುಡಿ, 'ಡೊಮಿಂಗೋ, 'ಹಣೆ ಬರಹ, 'ನಮ್ಮ ಜಾತಿ, 'ಮಂಗಳಾರತಿ' ಇತ್ಯಾದಿಗಳು ಸಮಾಜದೊಂದಿಗೆ ಮಾನವ ಬದುಕಿನ ವೈಯಕ್ತಿಕ ಸಂಘರ್ಷವನ್ನು ಮುಕ್ತವಾಗಿ ಚರ್ಚಿಸಿವೆ. ಬಡತನ, ಅಸ್ಪೃಶ್ಯತೆ, ಬಂಡವಾಳಶಾಹಿ ಸಮಸ್ಯೆಗಳನ್ನು ನೇರವಾಗಿಯೂ ನಿರೂಪಿಸುತ್ತವೆ.

ಗಾಂಧಿ, ವಾಲ್ಟೆರ್, ಲಿಪ್‌ಮನ್, ಹ್ಯಾವಲಾಕ್ ಎಲ್ಲಿಸ್ ಮುಂತಾದ ತತ್ವಜ್ಞಾನಿಗಳ ವಿಚಾರಗಳಿಂದ ಪ್ರೇರಿತರಾಗಿ ಸಮಾಜ ಸುಧಾರಣೆಯ ವಿಚಾರಗಳನ್ನು ಜನರಿಗೆ ತಲುಪಿಸಲು ಸಾಮಾಜಿಕ ಸಮಸ್ಯೆಗಳನ್ನು ಅತ್ಯಂತ ಸಮರ್ಪಕವಾಗಿ ಬಿಂಬಿಸಲು ಗದ್ಯನಾಟಕಗಳನ್ನು ಕಾರಂತರು ಆರಿಸಿದ್ದಾರೆ. ಶೈಲಿ, ಸಂವಿಧಾನದ ಮೇಲೆ ಡಾ. ಷೆರಿಡಾನ್ ನಾಟಕಗಳ ಪ್ರಭಾವ ಕಂಡುಬಂದರೂ ಕಾರಂತರು ತಮ್ಮದೇ ಆದ ಶೈಲಿಯನ್ನು ರೂಪಿಸಿಕೊಂಡಿದ್ದಾರೆ.

ತದನಂತರ ಅವರ ನಾಟಕ ರೂಪಕಗಳು 'ಪರಿವರ್ತನ ಭಾರತ' ಮತ್ತು 'ಬೌದ್ಧಯಾತ್ರೆ' ಸರಳರೂಪದ ಪದ್ಯರಚನೆಗಳು. ಹಿಮ್ಮೇಳದ ಹಾಡಿಗೆ ಪಾತ್ರಗಳು ರಂಗ ಪ್ರವೇಶಿಸಿ ತರಂಗಿತ ಅಭಿನಯ ನೀಡುವ ಕೆಲಸವನ್ನು ಮಾಡಿದರು. ಇದರ ನಂತರದ ಪ್ರಯೋಗಗಳೇ ಗೀತ ನಾಟಕಗಳು. ಇದರ ಮೊದಲ ಪ್ರಯತ್ನವಾಗಿ 'ನಾರೀ ರತ್ನವನ್ನು' ರಚಿಸಿದರು. ಈ ನಾಟಕದಲ್ಲಿ ಹಿಮ್ಮೇಳದ ಗಾಯಕರಿರದೆ ಪಾತ್ರಗಳು ಸ್ವತಃ ಅಭಿನಯಿಸುತ್ತಾ ಹಾಡಿದರು. ಇವೆಲ್ಲಾ ಪ್ರಯತ್ನಗಳ ಮುಂದುವರೆದ ಫಲವಾಗಿ 'ಮುಕ್ತದ್ವಾರ'ದಂತಹ ಗೀತನಾಟಕಗಳು ಅವರಿಂದ ರಚನೆಯಾದವು.

'ರೂಢಿಯ ಗದ್ಯ ನಾಟಕಗಳಿಗಿಂತ ಗೀತನಾಟಕಗಳಲ್ಲಿ ಬಳಸುವ ರಾಗದ ಇಂಪು ಪ್ರೇಕ್ಷಕನಿಗೆ ಮೋಹಕವಾಗಿ ಕೇಳುವ ನಂಬಿಕೆ ಇಲ್ಲದಿರುವುದು, ಅದಕ್ಕಿರುವ ಶಕ್ತಿ ಮತ್ತು ಸಾಹಿತ್ಯದ ಸೊಗಸು ಸಾಹಿತ್ಯದ ಸ್ವರೂಪವನ್ನು ಅವಲಂಬಿಸಿದೆ' (2) ಎಂದು ಭಾವಿಸಿದ ಕಾರಂತರು ಇಂಪಿನ ಜೊತೆಗೆ ಗೀತ ಸಾಹಿತ್ಯವು ಅರ್ಥಸೌಂದರ್ಯವೂ ಮುಖ್ಯ ಎನ್ನುವ ಭಾವನೆ ಸ್ಪಷ್ಟವಾಗಿ ಅವರ ಗೀತನಾಟಕಗಳು ತೋರಿಸುತ್ತವೆ. ಇಲ್ಲಿ ಸಂಗೀತ, ಸಾಹಿತ್ಯಗಳ ಸಾಮರಸ್ಯ ಮತ್ತು ಸಮತೋಲನಗಳು ಮುಖ್ಯವಾಗಿರಬೇಕು ಎನ್ನುವುದು ಸರ್ವವೇದ್ಯ ಸಂಗತಿ.

"ಗೀತನಾಟಕ, ಬಿಡುಗೀತೆಗಳ ಒಂದು ಗುಚ್ಛವಾಗಲಾರದು. ಬೇರೆಯ ರೂಪಕದಲ್ಲಿ ಹೇಳುವುದಾದರೆ– ಬಿಡುಗೀತೆ ಒಂದು ಶಿಲ್ಪಕೃತಿ; ಅದರ ವಿಷಯಕ್ಕೆ ವಿಸ್ತೃತಿ ಚಿಕ್ಕದು. ನಾಟಕ– ಒಂದು ವಾಸ್ತುವಿದ್ದಂತೆ. ಆದುದರಿಂದ ಬಿಡು ಹಾಡಿನ ರೂಪ, ಗೀತ ನಾಟಕಕ್ಕೆ ಸಹಾಯವಾಗಲಾರದು." (ಗೀತ ನಾಟಕಗಳು ಪು.ಸಂ.4) ಎಂದು ಗೀತನಾಟಕಗಳ ಹೊರಸ್ವರೂಪದ ಕುರಿತು ಕಾರಂತರು ಹೇಳುತ್ತಾರೆ. ಹಾಡು, ನೃತ್ಯ, ಸಂಗೀತ ಹೊಂದಿಕೆಯಾಗುವ ನೋಟವು ಗೀತನಾಟಕಕ್ಕೆ ಮುಖ್ಯವಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ರಂಗದಲ್ಲಿ ತಮ್ಮನ್ನು ಅನೇಕ ಅನುಭವಗಳಿಗೆ ಒಡ್ಡಿಕೊಂಡ ಕಾರಂತರಿಗೆ ಗೀತನಾಟಕಗಳ ಮಾಧ್ಯಮವಾದ ಸಂಗೀತ ವಿಭಾಗವು ನಿರಂತರ ಪ್ರಯೋಗಗಳಿಗೆ ಒಳಗಾಯಿತು. ನಾಟಕದ ವಿಚಾರಗಳನ್ನು ಸಂಗೀತ ಸಮರ್ಥವಾಗಿ ನಿರೂಪಿಸುತ್ತದೆಯೇ ಎಂಬ ವಿಷಯದಲ್ಲಿ ಸಂದೇಹವಿದ್ದುದರಿಂದ ವಿಭಿನ್ನ ಸಂಗೀತ ಧಾಟಿಗಳನ್ನು ಬಳಸಿ ಅದರ ಅಭಿವ್ಯಕ್ತಿ ಸಾಧ್ಯತೆಗಳನ್ನು ವಿಸ್ತರಿಸಿದರು.

**ಕಾರಂತರ ಗೀತ ನಾಟಕಗಳ ವಸ್ತು:**

ಕಾರಂತರು ರಚಿಸಿದ 11 ಗೀತನಾಟಕಗಳನ್ನು ಗಮನಿಸಿದರೆ ಅವು ಪೌರಾಣಿಕ ಐತಿಹಾಸಿಕ ವಾಸ್ತವಿಕ ಜನಪದೀಯ ಮತ್ತು ಕಲ್ಪಿತ ವಸ್ತುಗಳನ್ನು ಹೊಂದಿವೆ. ಮುಕ್ತದ್ವಾರ (1931) ಅವರ ಮೊದಲ ಕೃತಿ. ಇದು ನೃತ್ಯ, ಗೀತನಾಟಕಗಳ ಒಂದು ಮೇಳ. ಇಲ್ಲಿ ಗೀತ ರೀತಿಯು ತೀರ ಸರಳವಾಗಿದೆ. ಮುಂದೆ ಅವರು ಪ್ರಹಸನವನ್ನು ರಚಿಸಿದರು. 'ಬದುಕಬಹುದು'

ನಾಟಕವನ್ನು 1934 ರಲ್ಲಿ ರಚಿಸಿ ರಂಗಪ್ರಯೋಗ ಮಾಡಿದರು. ಯುರೋಪಿನ ಒಪೆರಾ 'ದಿ ಮಿಕಾಡೋ' ನೋಡಿ ಅಂಥದೊಂದು ಪ್ರಯೋಗ ಮಾಡಿದರು. ಈ ಎಲ್ಲ ನಾಟಕಗಳನ್ನು ರಂಗಭೂಮಿಗೆ ತಂದುದರಿಂದ ಅವು ಕೇವಲ – 'ಆರಾಮೂಸನದ ಕನಸುಗಳೆಂದು ಯಾರೂ ತಿಳಿಯಬೇಕಾಗಿಲ್ಲ' (ಗೀತ ನಾಟಕಗಳು ಪು. ಸಂ 6) ಎಂದು ಪ್ರಯೋಗ ಕ್ಲಿಷ್ಟತೆಯ ಕುರಿತು ಕಾರಂತರು ಮಾತನಾಡಿದ್ದಾರೆ.

ಜನಸಾಮಾನ್ಯರ ಸರಳ ಜೀವನ, ಸರಳ ಭಾವನೆಗಳನ್ನು ಚೆನ್ನಾಗಿ, ಸರಳವಾಗಿ ತುಳು ಜಾನಪದ ಮಾದರಿಯಲ್ಲಿ ಚಿತ್ರಿಸುವ 'ಸೋಮಿಯ ಸೌಭಾಗ್ಯ' , 'ಯಾರೋ ಅಂದರು', ಎನ್ನುವ ವಿಕಟವಿಮರ್ಶೆ, 'ಕಿಸಾಗೋತಮಿ' (1940) ಲವಕುಶ, ಸಾವಿತ್ರಿ ಸತ್ಯವಾನ್ ಸಾವಿತ್ರಿ (1945) ನಗು–ವ್ಯಥೆಗಳ' ಸಮ್ಮಿಶ್ರಣ ವಸ್ತುವನ್ನು ಹೊಂದಿದೆ. ಇಲ್ಲಿ ಕೊನೆಯದಾದ ಬುದ್ಧೋದಯವು. (1946) ಒಂದು ನವೀನ ರಚನೆ. ಜಾನಪದ, ಮಾರ್ಗ ಗೀತಗಳ ಮಿಲನವಾದ 'ಋತುಯಾತ್ರೆ', ಮೊದಲಾದ ಕೃತಿಗಳು ಕಾರಂತರ ಮೂಸೆಯಲ್ಲಿ ಹೊಳೆದಿವೆ.

ಮನುಷ್ಯನ ಭಾವಲೋಕವನ್ನು ಸದಾ ಕಾಡುವ ಹುಟ್ಟು, ಸಾವು, ನೋವು, ನಿರಾಸೆ, ಸಂಕಟ, ಸೋಲು ಹತಾಶೆಗಳು, ಪರಂಪರೆಯಿಂದಲೂ ಅದೇ ವ್ಯವಸ್ಥೆಯ ಶಾಶ್ವತ ಸಂಬಂಧಗಳನ್ನು ಮತ್ತೆ ಮತ್ತೆ ಈ ನಾಟಕಗಳು ಪುನರ್ ವ್ಯಾಖ್ಯಾನಿಸುತ್ತವೆ.

ರಂಗಪ್ರಯೋಗದ ದೃಷ್ಟಿಯಿಂದಲೂ ಅವರ ಗೀತ ರೂಪಕಗಳನ್ನು ಮೂಕನಾಟಕ, ಗೀತನಾಟಕ, ಛಾಯಾ ನಾಟಕಗಳೆಂದು ಗುರುತಿಸಬಹುದು (ಗೀತನಾಟಕಗಳು ಪು.ಸಂ. 9, 10) ಸಂದರ್ಭ, ಅನುಕೂಲ, ಪ್ರಯೋಗ ಈ ಮೂರು ನೆಲೆಗಳಿಂದಲೂ ಸಾರ್ಥಕವಾಗಿ ಕಾರಂತರ ಗೀತ ನಾಟಕಗಳು ಪ್ರದರ್ಶನ ಕಂಡಿವೆ. (3)

**ಮುಕ್ತದ್ವಾರ:**

ಮುಕ್ತದ್ವಾರ ನಾಟಕವನ್ನು ಕಾರಂತರು 1930ರಲ್ಲಿ ರಚಿಸಿದರು. ಇದು ಅವರ ಭವ್ಯವಾದ ಚಿಂತನಾ ಲಹರಿ, ಅವರ ತಾರ್ಕಿಕ ಕಲ್ಪನೆ ಮತ್ತು ಕಾವ್ಯ ಪ್ರತಿಭೆಗೆ ಸಾಕ್ಷಿಯಾಗಿದೆ. ಧರ್ಮ ಮತ್ತು ಮನುಕುಲದ ವಿಕಾಸದ ಹಂತಗಳನ್ನು ಅತ್ಯಂತ ಭವ್ಯತಮವಾಗಿ ಈ ನಾಟಕವು ವರ್ಣಿಸುತ್ತದೆ.

ಮುಕ್ತದ್ವಾರ ನಾಟಕದ ಕುರಿತು ತಮ್ಮ ಕೃತಿಯಲ್ಲಿ ಕಾರಂತರು ಹೀಗೆಂದಿದ್ದಾರೆ. "ನಾನು ಈ ಕೆಲವು ನಾಟಕಗಳಲ್ಲಿ ಆರಿಸಿಕೊಂಡ ವಿಷಯಗಳು ಎಂತಹ ಕಲಸುಮೇಲೋಗರ – ಎಂದು ಅನಿಸಲೂಬಹುದು ಕೆಲವರಿಗೆ. ಮುಕ್ತದ್ವಾರದಂಥದು ವಸ್ತುಲೋಕ, ಕಲ್ಪನಾ ಲೋಕಗಳ ಸಮ್ಮೇಳವಾಗಿದೆ. ಕತೆ–ವಾಸ್ತವಿಕವಲ್ಲ ಆದರೆ ಅದಕ್ಕೆ ಕಾರಣವಾದ ವಿಷಯ... ಮಾನವನ ಆಕಾಂಕ್ಷೆಯ ಒಂದು ರೂಪ. ಜೀವನ, ಧ್ಯೇಯಗಳೆಡೆಯಲ್ಲಿನ ಸೇತುವೆಯಿದ್ದಂತೆ. ಅದು ಯಾಜ್ಞವಲ್ಕ್ಯ ಇದ್ದಿರಲಿ ಇಲ್ಲದಿರಲಿ, ಮುಂದೆ ಕೃಷ್ಣ ಯೇಸುಗಳು ಸೇರಲಿ, ಸೇರದಿರಲಿ– ಜೀವನ ಮತ್ತು ಧರ್ಮದಲ್ಲಿ ಏಕತೆಯನ್ನು ಎಣಿಸುವ ಮಾನವನ ಹಂಬಲ ಮಾತ್ರ ವಸ್ತು ಲೋಕದ್ದೇ. (ಗೀತ ನಾಟಕಗಳು ಪು.ಸಂ 7)

ಜಾತಿ ಧರ್ಮಗಳ ಆವೇಶದ ಕುರುಡು ನಂಬಿಕೆಯಿಂದ ಉಂಟಾಗುವ ಗಲಭೆ, ಘರ್ಷಣೆಗಳು, ಹಿಂಸೆ, ರಕ್ತಪಾತಗಳು ಸಂಭವಿಸುತ್ತಲೇ ಇರುವ ಇಂದಿನ ಕಾಲಘಟ್ಟದಲ್ಲಿಯೂ ಈ ನಾಟಕವು ಅತ್ಯಂತ ಪ್ರಸ್ತುತವಾಗಿದೆ. ಎಲ್ಲಾ ಮತ ಧರ್ಮಗಳ ತತ್ವ ಸಾರವೇ ಏಸು, ಕೃಷ್ಣ, ಬುದ್ಧರು ಇವರದೇ ವಿವಿಧ ಸಂಭಾಷಣೆಗಳಲ್ಲಿ ಈ ನಾಟಕ ಗಟ್ಟಿಗೊಂಡಿದೆ. ನಾಟಕವು ಕಗ್ಗತ್ತಲ ಶೂನ್ಯದೊಂದಿಗೆ ಆರಂಭವಾಗುತ್ತದೆ.

**ಎಲ್ಲೆಲ್ಲೂ ಏನಿಲ್ಲ. ತಮವೆಂಬ ಹೆಬ್ಬಾವು**
**ಎಲ್ಲವನು ತಿಂದಂತೆ, ತಿಂದು ತೇಗುತೆ ತಾನು**
**ಜಡವಾಗಿ ಜೀವಕಳೆ ತೊರೆದು ಮಲಗಿರುವ**
**ಮಬ್ಬಿನಂದದಿ ಕಾಂಬ ಘೋರವೇನು!**

**ಮುಕ್ತದ್ವಾರ (ಗೀತ ನಾಟಕಗಳು ಪು ಸಂ:61)**

**ನಾನಿಲ್ಲ, ನೀನಿಲ್ಲ; ಇನ್ನಿಲ್ಲ, ಮುನ್ನಿಲ್ಲ.**
**ನಿಲ್ಲುತಿರೆ ನೆಲವಿಲ್ಲ, ನಿಲ್ಲಿಸುವ ಜೀವಿಲ್ಲ;**
**ಉಂಟೆನುವ ಸುಳಿವುಲ್ಲ, ಸೃಷ್ಟಿ ಕರ್ತನೆ ಇಲ್ಲ;**
**ಇಲ್ಲವೆನ್ನುವ ಸೊಲ್ಲ ಇಡುವನಿಲ್ಲ.**

**ಮುಕ್ತದ್ವಾರ (ಗೀತ ನಾಟಕಗಳು ಪು ಸಂ:62):**

ಮೇಲಿನ ಸಾಲುಗಳು ಸೃಷ್ಟಿಪೂರ್ವದ ಸ್ಥಿತಿಯನ್ನು ಸಾರ್ಥಕವಾಗಿ ಬಿಂಬಿಸಿವೆ. ಇಡೀ ನಾಟಕದಲ್ಲಿ 43 ಗೀತಗಳಿವೆ. ಇವುಗಳಲ್ಲಿ ಅರ್ಧಪಾಲು ಹಿನ್ನೆಲೆಯಲ್ಲಿ ನಡೆಯುತ್ತವೆ. ಶೂನ್ಯದಿಂದ ತೊಡಗಿ ವಿಜ್ಞಾನ ಯುಗದವರೆಗಿನ ಮನುಕುಲದ ವಿಕಾಸದ ಹರಿವು, ಬದಲಾದ ಪ್ರತಿಯೊಂದು ಕಾಲಯುಗವನ್ನು ಸೃಷ್ಟಿ ಸ್ಥಿತಿ ಚೈತನ್ಯಗಳ ಸ್ವಭಾವವನ್ನು ವ್ಯಾಖ್ಯಾನಿಸುತ್ತಾರೆ. ಬದಲಾಗುತ್ತ ಆಗಮಿಸುವ ಸಮಯಕ್ಕೆ ಕಾಲಪುರುಷ ಆತನ ಲೀಲಾ ನರ್ತನಕ್ಕೆ ನೇಪಥ್ಯವನ್ನು ಹಿನ್ನೆಲೆಯು ಒದಗಿಸುತ್ತದೆ. ಕಾಲಪರಿವರ್ತನೆಯನ್ನು ಮಾಪಕವಾಗಿ ಅಳೆಯುವ ಇಲ್ಲಿ ಅತೀ ಕ್ರಮ ಮಹತ್ವದ್ದಾಗಿದೆ.

**ಚಿನ್ನದಂಬರವೊಡೆದು, ಚೆನ್ನ ಸೊಗಸಿನ ಅಂಡ**
**ತನ್ನೊಳಗೆ ತಾ ಹುಟ್ಟಿ, ಕಂಗಳಿಗೆ ಕಾಂಬಂತೆನ (ಗೀತನಾಟಕಗಳು ಪು.ಸಂ 62)**
**ನೆಲನಾಗಿ, ನೀರಾಗಿ, ಕನಸಾಗಿ, ನೆನಸಾಗಿ**
**ಜೀನಭಾವದ ಸಕಲ ರೂಪನಾಗಿ. (ಗೀತನಾಟಕಗಳು ಪು.ಸಂ 63)**

ಶೂನ್ಯತೆ ಬೆಳಕಿನಾಗಮನದೊಂದಿಗೆ ಬದಲಾಗುತ್ತದೆ. ಎಲ್ಲೆಲ್ಲೂ ಜೀವ ಚೈತನ್ಯ ತುಂಬಿಕೊಳ್ಳುತ್ತದೆ.

**‘ಇಲ್ಲ’ವೆಂಬುದು ಎಲ್ಲ ‘ಇಹುದು’ ಎಂದಾಗುತಿದೆ**
**ಶಾಂತಮಯ ನೀರವದ ಸಾವು ಶೂನ್ಯಗಳೆಲ್ಲ**
**ಜಾಲಗಳು, ಲೀಲೆಗಳು ಹರಿದು ಕಳಚುತೆ ಬಿದ್ದು**
**ಬೆಳಕು ಬಲುಮೆಗಳಿಟ್ಟು ಉಕ್ಕುತಿಹೆವು. (ಗೀತನಾಟಕಗಳು ಪು.ಸಂ 63)**

ಜೀವ ಚೈತನ್ಯವನ್ನು ತುಂಬಿಕೊಂಡ ಜಗತ್ತು ಅತ್ಯಂತ ರಮಣೀಯ ಸದೃಶ್ಯವಾಗಿ ಗೋಚರಿಸುತ್ತದೆ. ಈ ಕಾಲದ ದೈವ ಮಹಿಮೆಯನ್ನು ಯಾಜ್ಞವಲ್ಕ್ಯನು ಕೊಂಡಾಡುತ್ತಾನೆ.

**ಕಾಂಬ ಕಣ್ಣಿಗೆ ಇದುವೆ ಸೋಜಿಗದ ನಾಟಕವು;**
**ನಾ ಬೇರೆ ‘‘ಅದು ಬೇರೆ’ ಗೈದುತೋರುವ ಮಾಯೆ!**
**ಪರಬ್ರಹ್ಮನೆಂಬೊಂದು ದೇದೀಪ್ಯ ಜ್ಯೋತಿಯಿದು,**
**ಸಾಗರದಿ ಪ್ರತಿಫಲಿಪ ಬಿಂಬಕೋಟ. (ಗೀತನಾಟಕಗಳು ಪು.ಸಂ 64)**

ಮುಂದೆ ಮುಂದೆ ಸಾಗುವ ಕಾಲ ಸರಿದಂತೆ ಮತ್ತೊಮ್ಮೆ ತಮ ತುಂಬುವುದು.

**ಕಾಲವೆಂಬ ಲೀಲೆ ನೀನು**
**ಮೇಲುಕೀಳು ಒಂದೆ ಸಮನು**

**ಕಾಲತುಳಿತದೆಮ್ಮ ಜಗವ**
**ಕುಣಿಸಿ ದಣಿಸಿ ಬಿಡುವೆಯೇನು**
**। ಹೆಜ್ಜೆಗೆಜ್ಜೆ ದನಿಯ ಮಾಡಿ! (ಗೀತನಾಟಕಗಳು ಪು.ಸಂ 65)**

ಈ ರೀತಿ ಕಾಲಪುರುಷನ ಆಗಮನದೊಂದಿಗೆ, ಉಪನಿಷತ್, ಕೃತ, ತ್ರೇತಾ ಕಳೆದು ದ್ವಾಪರಯುಗದಲ್ಲಿ ದ್ವೇಷ ಕಾರ್ಯಗಳೆಲ್ಲ ನರನ ಸದ್ಬುದ್ಧಿಯನ್ನು ಅರೆಯುವ ಕುರುಕ್ಷೇತ್ರ ರಣರಂಗದಲ್ಲಿ ಮಾನವ ನಿಜಧರ್ಮವನ್ನು ಕೃಷ್ಣಸಾರಿ ಹೇಳುತ್ತಾನೆ.

**ಕರ್ತವ್ಯವೇ ಒಂದು ಮಾನವನ ನಿಜಧರ್ಮ.**
**ಮಾಡುವುದು, ತೀಡುವುದು, ಮಾಡುತ್ತ ಮಡಿಯುನುದು,**
**ಗೈದುದರ ಫಲಗಳನ್ನು ಬಯಸದಿರುವುದು, ನೋಡು,**
**ಈಡಿಲ್ಲದಿಹ ಯೋಗ. ಯೋಗಿಯಾಗು (ಗೀತನಾಟಕಗಳು ಪು.ಸಂ. 67)**

ದ್ವಾಪರಯುಗ ಕೃಷ್ಣಾವತಾರದ ಕರ್ಮ–ಕರ್ತವ್ಯ ಹಾಗೂ ಸಿದ್ಧಾಂತಗಳು ಸರ್ವಕಾಲಕ್ಕೆ ಪ್ರಸ್ತುತವಾಗಿದೆ. ಕೃಷ್ಣನು ಬೋಧಿಸಿದ ಕರ್ಮಯೋಗ ಸಿದ್ಧಾಂತಗಳು, ಅಂದಿಗೆ ಅನಿವಾರ್ಯವೆನಿಸಿ, ಶಾಂತಿ, ಸಮಾಧಾನಗಳು ದೊರೆತಿರುವ ಸಾಧ್ಯತೆ ಇದ್ದುವಾದರೂ, ಕಾಲದ ಕೈವಾಡ ಉಪನಿಷತ್‌ಗಳ ಪುಣ್ಯಯುಗ, ದ್ವಾಪರದ 'ಕರ್ಮಯೋಗ' ತತ್ವಬೋಧೆ ಎಲ್ಲವೂ ಇಲ್ಲವೆನ್ನುವಂತಾಗಿಸುತ್ತದೆ. ಮುಂದಿನ ಪರ್ವದಲ್ಲಿ ಅವೆಲ್ಲವೂ ಶೂನ್ಯವಾಗಿ ಕಾಲನಟನ ಬರುವಿಕೆಯೊಂದಿಗೆ ಮತ್ತೊಂದು ಬೌದ್ಧಯುಗ ಕಾಣಿಸಿಕೊಳ್ಳುತ್ತದೆ.

ಪುನರಾವರ್ತನೆಯಾದ, ಮೌಲ್ಯಹೀನ ಬದುಕನ್ನು ನೋಡಿದಾಗ ನಾಟಕಕಾರರು ಹೀಗೆನ್ನುತ್ತಾರೆ.

**ದ್ವಾಪರದ ಸಂಜೆಯೊಳು ಕೃಷ್ಣನುಲಿದಿಹ ಗೀತೆ,**
**ಸಂಜೆವಕ್ಕಿಗಳೊಡನೆ ಕಂಠವನು ಬಿಗಿಹಿಡಿದು**
**ಕತ್ತಲಿನ ಕರೆಗಾಳಿ ಒತ್ತಿ ಬೀಸುವ ಮುನ್ನ**
**ಸತ್ತು ಹೋಗಿರಬೇಕು–ಸುಳಿವು ಮರೆಸಿ. (ಗೀತನಾಟಕಗಳು ಪು.ಸಂ 68)**

ಬೌದ್ಧ ಯುಗ ಕ್ರಮಿಸಿ–ಸೃಷ್ಟಿ, ಸ್ಥಿತಿ, ಲಯಗಳ ಕರ್ತೃ ಬೇರೆಯಾದರೂ, ಅದ್ವೈತ ತತ್ವಾನಿಸಾರ ದೇವನೊಬ್ಬ ನಾಮ ಹಲವು ಎಂಬ ನಂಬಿಕೆಗೆ ವಿರುದ್ಧವಾಗಿ ಕಾದಾಡುವ ಸೋಜಿಗ ನಾಟಕದುದ್ದಕ್ಕೂ ಬರುತ್ತದೆ.

ಮುಂದಿನ ಕಾಲಚಕ್ರ ತಿರುಗುವಿಕೆಯಲ್ಲಿ ಬುದ್ಧನ ಮಾತು, ಸಂಸಾರ ಜೀವನದ ನಶ್ವರತೆ, ಆಸೆಯೇ ದುಃಖದ ಮೂಲ, ಹಿಂಸೆಯೇ ಆತ್ಮವಿನಾಶಕ್ಕೆ ಕಾರಣವೆಂಬಂತಹ ವಿಚಾರಗಳು ಪರಿವರ್ತನೆ ತರದೆ, ಬೌದ್ಧಯುಗವೂ ಮುಗಿದು ಕಾಲ ಚಕ್ರ ಮುಂದೆ ಸಾಗುತ್ತದೆ.

**ತನ್ನ ಹೃದಯದ ಮಮತೆ ಜಗಕೆ ಹಂಚಲು ಹೋಗಿ**
**ತನ್ನವರ ಅಜ್ಞಾನ ದ್ವೇಷಗಳಿಗೀಡಾಗಿ**
**ಇನ್ನಿಲ್ಲದಿಹ ಕಷ್ಟ ತಾಪಗಳ ಹೊರೆ ಹೊತ್ತು**
**ತನ್ನ ಮೃತ್ಯುವ ನೋಡು, ತಬ್ಬಿ ಬರುವ. (ಗೀತನಾಟಕಗಳು ಪು.ಸಂ 71)**

ಎನ್ನುತ್ತಾ ಪ್ರೀತಿ, ಮಮತೆ, ದಯೆ, ಕರುಣಾ ಸಾಗರವಾಗಿದ್ದ ಏಸುಯುಗವು ಕಾಲಚಕ್ರದ ಉರುಳಿನಲ್ಲಿ ಕಳೆದು ಹೋಯಿತು. ಮುಂದೆ ಬರುವ ನವಯುಗದಲ್ಲಿ. ನೇರವಾಗಿ ಮುಖಾಮುಖಿಯಾಗಿ ನಡೆಯುವ ಕ್ರೌರ್ಯದ, ದ್ವೇಷದ ಸೆಣಸಾಟವನ್ನು ಬೇಕಾದರೆ ಎದುರಿಸಬಹುದಾದರೂ, ನವಯುಗದ ನಯವಂಚಕತನ, ಧರ್ಮದ ಸೋಗಿನಲ್ಲಿ ಕಾಣುವ ಧೂರ್ತತನವನ್ನು ಪತ್ತೆ ಹಚ್ಚುವುದು ಕಷ್ಟದ ಕೆಲಸವಾಗುತ್ತದೆ. ಆಧುನಿಕ ಮನುಕುಲವು

‘ಛದ್ಮವೇಷ’ ಧರಿಸಿ ಒಳಗೊಂದು ಹೊರಗೊಂದು ಬದುಕು ನಡೆಸುವುದನ್ನು ಅತ್ಯಂತ ಮಾರ್ಮಿಕವಾಗಿ ಕಾರಂತರು ವಿವರಿಸುತ್ತಾರೆ.

**ಬಾಹ್ಯದ ತೊಡುಗೆಯು ಯೋಗಿಗಳಂತೆ**
**ಕಾಯದ ಬಯಕೆಯ ಭೋಗಿಗಳಂತೆ**
**ಆಶೆಯ ಪಾಶವೆ ಹೊತ್ತಿಹ ಕಂತೆ**
**ಬರುವನು ನೋಡೆಲೊ ಮುದ್ರೆಯ ಧರಿಸಿ**
**ಕೊರಳಲಿ ಕಾಂಬುದು ಮಾಲೆಯು ತುಳಸಿ**
**ಹೊನ್ನಿನ ಆಸೆಗೆ ಬರುವನು ಬಳಸಿ (ಗೀತನಾಟಕಗಳು ಪುಟ:72)**

ಎನ್ನುವ ಸಾಲುಗಳು ಭೋಗಿ ಯೋಗಿಯಂತೆ ನಟಿಸುವ ಕಾಲಪುರುಷನ ಲೀಲೆ ನಾಟಕಕಾರರನ್ನು ಬೆರಗುಗೊಳಿಸುತ್ತದೆ. ಹೀಗೆ ಉಪನಿಷತ್ ಯುಗ, ದ್ವಾಪರ ಯುಗ, ಬೌದ್ಧಯುಗ ಇತ್ಯಾದಿಯಾಗಿ ಒಂದೊಂದು ಯುಗವನ್ನೂ ಪ್ರತಿನಿಧಿಸುವ ಯಾಜ್ಞವಲ್ಕ್ಯ, ಕೃಷ್ಣ, ಬುದ್ಧ. ಏಸು, ಪೈಗಂಬರ ಮೊದಲಾದ ಮಹಾನುಭಾವರು, ವಿಭೂತಿ ಪುರುಷರು, ಮಾನವ ಪ್ರೇಮ, ಕಲ್ಯಾಣ, ಶಾಂತಿ, ಸುಭಿಕ್ಷೆಗಳಿಗಾಗಿ ಬೋಧಿಸಿದ ಉದಾತ್ತ ತತ್ವಗಳನ್ನು, ಅವರ ಅನುಯಾಯಿಗಳಾದ ತೀರಾ ಸಂಕುಚಿತ ಮನೋಮತ ಹೊಂದಿರುವ ಪುರೋಹಿತ, ಪಾದ್ರಿ, ಭಿಕ್ಕು, ಮೌಲ್ವಿ ಮೊದಲಾದವರು ಮತೀಯ ಕುರುಡು ತನದಿಂದ ಕಚ್ಚಾಡಿ, ಮತಾಂಧತೆಯ ವೈರಾಗ್ಯದ ಸೋಗಿನ ನಾಟಕದ ಬಣ್ಣ ಹಚ್ಚಿ, ಅವರವರ ಅತಿರೇಕಕ್ಕೆ ಹೋದರೆ, ಮುಂದೆ ಬರುವ ವಿಜ್ಞಾನ ಯುಗ, ಇವೆಲ್ಲಕ್ಕಿಂತ ತದ್ವಿರುದ್ದವಾದ ನೆಲೆಯಲ್ಲಿ, ಧರ್ಮ, ದೇವರುಗಳನ್ನೇ ಸುಳ್ಳೆಂದು ಘೋಷಿಸಿ, ನಾಸ್ತಿಕ ವಾದವನ್ನು ಹಿಡಿದೆತ್ತುತ್ತದೆ.

ತಮ್ಮ ಮತಗಳ ಆವೇಶದಲ್ಲಿ ಕಚ್ಚಾಡುವ ಧರ್ಮದೂತರಿಗೆ, ಸಮಾನತೆಯ ಭಾವದಿಂದ ಕೃಷ್ಣ, ಯೇಸು, ಗೌತಮ, ಜರತುಷ್ಟ್ರ, ಋಷಿಗಳು ಸ್ವರ್ಗ ಸೀಮೆಯಲ್ಲಿ ತೇಜೋದೇಹಿಗಳಾಗಿ, ದಿವ್ಯಾತ್ಮ ಜ್ಯೋತಿಗಳಾಗಿ ಬೆರೆತು ಗೆಳೆತನದಲ್ಲಿ ಕೂಡಿರುವ ಕಾಲ್ಪನಿಕ ದೃಶ್ಯವೊಂದು ಕಾಣಿಸುತ್ತದೆ. ಇದನ್ನು ಕಂಡ ಅವರೆಲ್ಲರೂ ಅಚ್ಚರಿಗೊಳ್ಳುತ್ತಾ, ಸಿಡಿಮಿಡಿಗೊಳ್ಳುತ್ತಾ, ಅಪಶ್ರುತಿಗಳನ್ನು ನುಡಿಯುತ್ತಲೇ ನಡೆತಂದು, ತಮ್ಮ ಮತ ಪ್ರವರ್ತಕ, ಪ್ರವಾದಿ, ಪುರೋಹಿತರುಗಳನ್ನು ಒಟ್ಟಿಗೆ ದೂರುತ್ತಾರೆ. ‘‘ಜಗಳಕೆ ನಮ್ಮನು ಬಿಟ್ಟು ಸುಖಿಗಳಿವರು’ ಎನ್ನುವ ಆರೋಪಕ್ಕೆ ಗುರಿ ಮಾಡುತ್ತಾರೆ. ಪರಮತ ಸಹಿಷ್ಣುತೆಯಿಲ್ಲದೆ, ಭ್ರಾತೃ ಭಾವವಿಲ್ಲದೆ ವಿನಾಕಾರಣ ಹಗೆ ಸಾಧಿಸುವ ಕೆಟ್ಟ ಛಲಕ್ಕೆ ಇವರುಗಳಿಗೆ ಸಾಮರಸ್ಯದ ಬದುಕು ಚುಚ್ಚುತ್ತದೆ. ಪಾದ್ರಿ ಭೇದಭಾವವನ್ನು ಏಸುಗಾಗಿಯೇ ಮಾಡಿದನೆಂದು ದೂರಿದರೆ, ವಿಪ್ರ, ಕೃಷ್ಣನನ್ನು ಮ್ಲೇಚ್ಛನ ಸ್ನೇಹಕ್ಕಾಗಿ ಹಳಿಯುತ್ತಾನೆ. ಇವರೆಲ್ಲಾ ತಮ್ಮನ್ನು ವಂಚಿಸಿದರು ಎಂಬ ಕಾರಣಕ್ಕೆ ಸಿಡಿಮಿಡಿಗೊಳ್ಳುತ್ತಿರುವಾಗ, ಯಾಜ್ಞವಲ್ಕ್ಯನು ಸಮಾಧಾನಗೊಳಿಸಿ, ಮುಕ್ತದ್ವಾರದ ಆಚೆಗಿನ ಸುಂದರ ಲೋಕ ತೋರಿಸುತ್ತಾರೆ.

**ಉಪಸಂಹಾರ:**

ಈ ಗೀತ ನಾಟಕವು ಮನುಷ್ಯ ತನ್ನ ಅಜ್ಞಾನ, ಅಹಂಕಾರ ತೊರೆದು ಪ್ರಪಂಚದಲ್ಲಿ ಚೈತನ್ಯವನ್ನರಿತು ಮುಕ್ತಿ ಹೊಂದುವ ತಾತ್ವಿಕ ಸಂದೇಶ ನೀಡುತ್ತದೆ. ಇದನ್ನೇ ಕಾರಂತರು ಗೀತೆ, ನೃತ್ಯ, ಸಂಭಾಷಣೆ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಗೀತ ನಾಟಕವು ಯುಗಯುಗಗಳ ಇತಿಹಾಸವನ್ನು ಸಾಂದ್ರವಾಗಿ ಭಟ್ಟಿ ಇಳಿಸಿದೆ. ಇಲ್ಲಿನ ವಸ್ತು ಲೋಕ ಕಲ್ಪನಾ ಲೋಕದೊಂದಿಗೆ ಸಮ್ಮಿಲನವಾಗಿದೆ. ಕತೆ ವಾಸ್ತವಿಕವಲ್ಲದಿದ್ದರೂ ಅದಕ್ಕೆ ಕಾರಣವಾದ ವಿಷಯ ವೈವಿಧ್ಯವು

ಮಾನವ ಆಕಾಂಕ್ಷೆಯ ಒಂದು ರೂಪ. ಇಲ್ಲಿ ದ್ವೇಷ, ಭ್ರಾತೃತ್ವ ಮಾನವೀಯತೆ, ಹೃದಯ ತತ್ವಗಳ ನೆಲೆಯು ಗೋಚರವಾಗುತ್ತದೆ. ಗೀತ ನಾಟಕಗಳಲ್ಲಿ "ಮುಕ್ತದ್ವಾರ" ಕಾರಂತರ ಮೊದಲ ಪ್ರಯೋಗ. ವಸ್ತು, ಕಲ್ಪನೆ, ಭವ್ಯತೆ, ಉದ್ವೇಗದ ದೃಷ್ಟಿಯಿಂದ, ಅದರಲ್ಲಿ ನಿರೂಪಿತವಾದ ತಾತ್ವಿಕ ವಿಚಾರಗಳಿಂದ, ಈ ಕೃತಿ ಮಹತ್ವದ್ದಾಗಿದೆ. ರಂಗದ ಮೇಲಿನ ಪ್ರಯೋಗವು ಸವಾಲಿನಿಂದ ಕೂಡಿದೆ.

**ಪರಾಮರ್ಶನ ಗ್ರಂಥಗಳು:**

1. ಶಿವರಾಮ ಕಾರಂತ, (1945), ಗೀತ ನಾಟಕಗಳು, ಪುತ್ತೂರು (ದ. ಕ.): ಹರ್ಷ ಮುದ್ರಣ ಪ್ರಕಟಣಾಲಯ.
2. ವಿಜಯಾ ಸುಬ್ಬರಾಜ್, (2011), ಗೀತ ನಾಟಕಗಳು, ರಾಮನಗರ (ನೆಲಮಲೆ): ನೆಲಮಲೆ ಪಬ್ಲಿಷಿಂಗ್ ಹೌಸ್.
3. ಮರುಳಸಿದ್ಧಪ್ಪ ಕೆ., (2013), ಆಧುನಿಕ ಕನ್ನಡ ನಾಟಕ, ಬೆಂಗಳೂರು: ಅಂಕಿತ ಪುಸ್ತಕ.
4. ರಂಗನಾಥ್ ಎಚ್. ಕೆ., (2024), ಕನ್ನಡ ರಂಗಭೂಮಿ, ಬೆಂಗಳೂರು: ಹೇಮಂತ ಸಾಹಿತ್ಯ.